# ನಮ್ಮ ಸುತ್ತಲಿನ ಆರ್ಥಿಕ

ಅಧ್ಯಾಯ ೧೪

"ಸಮೃದ್ಧಿಯ ಮೂಲವು ಆರ್ಥಿಕ ಚಟುವಟಿಕೆಯಾಗಿದೆ. ಅದರ ಕೊರತೆಯು ಸಮಾಜದಲ್ಲಿ ಸಮಸ್ಯೆಗಳನ್ನು ತರುತ್ತದೆ. ಫಲಪ್ರದವಾದ ಆರ್ಥಿಕ ಚಟುವಟಿಕೆಯ ಗೈರುಹಾಜರಿಯು ಪ್ರಸ್ತುತ ಸಮೃದ್ಧಿ ಮತ್ತು ಭವಿಷ್ಯದ ಬೆಳವಣಿಗೆ ಎರಡಕ್ಕೂ ಅಪಾಯವನ್ನುಂಟು ಮಾಡುತ್ತದೆ."

- ಕೌಟಿಲ್ಯನ ಅರ್ಥಶಾಸ್ತ್ರ

**ಕೆಲವು ಮುಖ್ಯ ಪ್ರಶ್ನೆಗಳು:**

೧. ಆರ್ಥಿಕ ಚಟುವಟಿಕೆಗಳನ್ನು ಹೇಗೆ ವರ್ಗೀಕರಿಸಲಾಗಿದೆ?
೨. ಅವುಗಳ ಚಟುವಟಿಕೆಯನ್ನು ಆಧರಿಸಿ ಆರ್ಥಿಕ ರಂಗಗಳ ಗುಂಪುಗಳನ್ನು ಏಕೆ ಮಾಡಲಾಗಿದೆ?
೩. ಮೂರು ಆರ್ಥಿಕ ವಲಯಗಳು ಒಂದಕ್ಕೊಂದು ಹೇಗೆ ಅಂತರ್ ಸಂಬಂಧ ಹೊಂದಿವೆ?

0681CH14

© NCERT not to be republished

## ಪರಿಚಯ:

ಅಧ್ಯಾಯ ೧೩ ರಲ್ಲಿ ನಾವು ಎರಡು ರೀತಿಯ ಆರ್ಥಿಕ ಚಟುವಟಿಕೆಗಳ ಬಗ್ಗೆ ಕಲಿತಿದ್ದೇವೆ. ಅವು ಆರ್ಥಿಕ ಮತ್ತು ಆರ್ಥಿಕೇತರ ಎಂದು **ವಿತ್ತೀಯ ಮೌಲ್ಯ**ವನ್ನು ಸೃಷ್ಟಿಸುವ ಚಟುವಟಿಕೆಗಳನ್ನು ಆರ್ಥಿಕ ಚಟುವಟಿಕೆಗಳು ಎಂದು ಕರೆಯಲಾಗುತ್ತದೆ. ಆರ್ಥಿಕೇತರ ಚಟುವಟಿಕೆಗಳ ಪ್ರಾಮುಖ್ಯತೆಯ ಬಗ್ಗೆಯೂ ನಾವು ಕಲಿತಿದ್ದೇವೆ. ಈ ಚಟುವಟಿಕೆಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ನಾವು ಆರ್ಥಿಕ ಚಟುವಟಿಕೆಗಳನ್ನು ಹೇಗೆ ವರ್ಗೀಕರಿಸಲಾಗಿದೆ. ಅವುಗಳನ್ನು ಯಾವುದು ಪ್ರತ್ಯೇಕಿಸುತ್ತದೆ ಎಂಬುದನ್ನು ಈ ಅಧ್ಯಾಯದಲ್ಲಿ ಕಲಿಯುತ್ತೇವೆ.

**ವಿತ್ತೀಯ ಮೌಲ್ಯ:** ಹಣದ ಪರಿಭಾಷೆಯಲ್ಲಿ ಅಳೆಯಬಹುದಾದ ಒಂದು ವಸ್ತುವಿನ ಮೌಲ್ಯ.



ದಶಕಗಳಿಂದ ಆರ್ಥಿಕ ಚಟುವಟಿಕೆಗಳ ಸಂಖ್ಯೆಯು ಅಗಾಧವಾಗಿ ಹೆಚ್ಚಾಗಿದೆ. ಉದಾಹರಣೆಗೆ ಈ ಹಿಂದೆ ಹೆಚ್ಚಿನ ಜನರು ಕೃಷಿ, ಜಾನುವಾರು ಸಾಕಣೆ, ಉಪಕರಣಗಳ ಉತ್ಪಾದನೆ, ಕುಂಬಾರಿಕೆ ಮತ್ತು ಬಟ್ಟೆ ನೇಯ್ಗೆಯಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಸಮಾಜವು ಮುಂದುವರೆದಂತೆ ಜನರು ತಮ್ಮ ಜೀವನೋಪಾಯವನ್ನು ಅಭಿವೃದ್ಧಿಪಡಿಸುವ ಆರ್ಥಿಕ ಚಟುವಟಿಕೆಗಳ ಸಂಖ್ಯೆ ವ್ಯಾಪಕವಾಗಿ ಹೆಚ್ಚಾಯಿತು.

ಇಂದು ಕಂಪ್ಯೂಟರ, ಮೊಬೈಲ್ ಫೋನ್ ಮತ್ತು ಡ್ರೋನ್ ತಯಾರಿಕೆಯಂತಹ ವೈವಿಧ್ಯಮಯ ಆರ್ಥಿಕ ಚಟುವಟಿಕೆಗಳಿವೆ. ಬ್ಯಾಂಕು, ಶಾಲೆ ಮತ್ತು ಹೋಟೆಲಗಳಲ್ಲಿ ಕೆಲಸ ಮಾಡುವುದು, ಸಾಗಾಣಿಕೆಗಾಗಿ ವಿವಿಧ ರೀತಿಯ ವಾಹನಗಳನ್ನು ಓಡಿಸುವುದು, ಪೀಠೋಪಕರಣಗಳನ್ನು ತಯಾರಿಸುವುದು, ಯಂತ್ರಗಳನ್ನು ಬಳಸಿಕೊಂಡು ಬಟ್ಟೆಗಳನ್ನು ವಿನ್ಯಾಸಗೊಳಿಸುವುದು, ತಂತ್ರಾಂಶಗಳನ್ನು ಸೃಷ್ಟಿಸುವುದು; ಶೀತಾಗಾರ (ಫ್ರಿಡ್ಜ್) ಮತ್ತು ಬಟ್ಟೆ ತೊಳೆಯುವ ಯಂತ್ರ (ವಾಷಿಂಗ್ ಮಷಿನ್) ಗಳನ್ನು ದುರಸ್ತಿ ಮಾಡುವುದು ಇತ್ಯಾದಿ. ಈ ಎಲ್ಲಾ ಚಟುವಟಿಕೆಗಳನ್ನು ವರ್ಗೀಕರಿಸುವುದು ಅವು ಹೇಗೆ ಕಾರ್ಯನಿರ್ವಹಿಸುತ್ತವೆ. ಅವು ಪರಸ್ಪರ ಹೊಂದಿರುವ ಸಂಪರ್ಕಗಳನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ.

## ಆರ್ಥಿಕ ಚಟುವಟಿಕೆಗಳನ್ನು ಆರ್ಥಿಕ ವಲಯಗಳಾಗಿ ವರ್ಗೀಕರಿಸುವುದು:

**ಆರ್ಥಿಕ ವಲಯಗಳು:** ರಾಷ್ಟ್ರದ ಆರ್ಥಿಕ ಸಮೃದ್ಧಿಗೆ ಸಹಾಯ ಮಾಡುವ ವಿವಿಧ ಚಟುವಟಿಕೆಗಳನ್ನು ಒಳಗೊಂಡಿರುವ ವಿಶಾಲ ಗುಂಪುಗಳು.

ಕೆಲವು ಆರ್ಥಿಕ ಚಟುವಟಿಕೆಗಳು ಒಂದೇ ರೀತಿಯ ಗುಣಲಕ್ಷಣಗಳನ್ನು ಹೊಂದಿರುತ್ತವೆ. ಇದರ ಆಧಾರದ ಮೇಲೆ ಅವುಗಳನ್ನು **ಆರ್ಥಿಕ ವಲಯಗಳು** ಎಂದು ಕರೆಯಲಾಗುವ ವಿಶಾಲ ಗುಂಪುಗಳಾಗಿ ವರ್ಗೀಕರಿಸಬಹುದು. ಆರ್ಥಿಕ ವಲಯಗಳ ಮೂರು ಪ್ರಮುಖ ವಿಧಗಳೆಂದರೆ ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ಆರ್ಥಿಕ ವಲಯಗಳು.

ಮುಖಪುಟದಲ್ಲಿರುವ ಚಿತ್ರವು ಈ ವರ್ಗಗಳ ಅಡಿಯಲ್ಲಿ ವಿಶಾಲ ಚಟುವಟಿಕೆಗಳನ್ನು ನಕ್ಷೆ ಮಾಡುತ್ತದೆ.

### ೧.ಪ್ರಾಥಮಿಕ ವಲಯದ ಚಟುವಟಿಕೆಗಳು:

ಸರಕುಗಳನ್ನು ಉತ್ಪಾದಿಸಲು ಜನರು ನೇರವಾಗಿ ಪ್ರಕೃತಿಯ ಮೇಲೆ ಅವಲಂಬಿತವಾಗಿರುವ **ಆರ್ಥಿಕ ಚಟುವಟಿಕೆಗಳನ್ನು** ಪ್ರಾಥಮಿಕ ಚಟುವಟಿಕೆಗಳು/ ಪ್ರಾಥಮಿಕ ವಲಯದ **ಆರ್ಥಿಕ ಚಟುವಟಿಕೆಗಳು** ಎಂದು ಕರೆಯಲಾಗುತ್ತದೆ.

**ಪ್ರಾಥಮಿಕ ವಲಯ:**
ಕೃಷಿ, ಮೀನುಗಾರಿಕೆ, ಅರಣ್ಯ ಇತ್ಯಾದಿಗಳಂತಹ ಪ್ರಕೃತಿಯಿಂದ ನೇರವಾಗಿ ಕಚ್ಚಾ ವಸ್ತುಗಳನ್ನು ಹೊರತೆಗೆಯುವುದನ್ನು ಒಳಗೊಂಡಿರುವ ಚಟುವಟಿಕೆಗಳ ಗುಂಪು. ಪ್ರಾಥಮಿಕ ವಲಯವಾಗಿದೆ.



© NCERT not to be republished

## ಆರ್ಥಿಕ ಚಟುವಟಿಕೆಗಳನ್ನು ಆಧರಿಸಿದ ಆರ್ಥಿಕ ವಲಯಗಳ ವರ್ಗೀಕರಣ:

| ಪ್ರಾಥಮಿಕ ವಲಯ | ದ್ವಿತೀಯ ವಲಯ | ತೃತೀಯ ವಲಯ |
| --- | --- | --- |
| ಕೃಷಿ | ಕಟ್ಟಡ ನಿರ್ಮಾಣ | ಆರೋಗ್ಯ ರಕ್ಷಣೆ |
| ಗಣಿಗಾರಿಕೆ | ತಯಾರಿಕೆ | ವ್ಯಾಪಾರ ಮತ್ತು ಲಾಜಿಸ್ಟಿಕ್ಸ್ |
| ಮೀನುಗಾರಿಕೆ | ನೀರು ಸರಬರಾಜು | ಸಂವಹನ |
| ಪಕ್ಷಿ-ಪ್ರಾಣಿ ಸಾಕಾಣಿಕೆ | ಸೌರ ವಿದ್ಯುತ್ | ಬ್ಯಾಂಕಿಂಗ್ |
| ಅರಣ್ಯ | ವಿದ್ಯುತ್ ಉತ್ಪಾದನೆ | ಸಾರಿಗೆ |

© NCERT not to be republished

ಉದಾಹರಣೆಗೆ, ಕೃಷಿ ಫಾರ್ಮ್‌ಗಳಿಂದ ಧಾನ್ಯ, ತರಕಾರಿಗಳನ್ನು ಬೆಳೆಸುವುದು, ಕಾಡುಗಳಿಂದ ಮರವನ್ನು ಸಂಗ್ರಹಿಸುವುದು, ಗಣಿಗಳಿಂದ ಕಲ್ಲಿದ್ದಲನ್ನು ಹೊರತೆಗೆಯುವುದು, ಮೀನುಗಾರಿಕೆಯಿಂದ ಮೀನು, ಕೋಳಿ ಸಾಕಣೆ ಕೇಂದ್ರಗಳಿಂದ ಮೊಟ್ಟೆಗಳು ಇತ್ಯಾದಿಗಳನ್ನು ಒಳಗೊಂಡಿರುವ ಕೆಲಸಗಳು ಪ್ರಾಥಮಿಕ ವಲಯದ ಆರ್ಥಿಕ ಚಟುವಟಿಕೆಗಳಾಗಿವೆ.

ಕೃಷಿ, ಗಣಿಗಾರಿಕೆ, ಮೀನುಗಾರಿಕೆ, ಜಾನುವಾರು ಸಾಕಾಣಿಕೆ, ಅರಣ್ಯ ಇತ್ಯಾದಿಗಳು ಅತ್ಯಂತ ಸಾಮಾನ್ಯ ಪ್ರಾಥಮಿಕ ಚಟುವಟಿಕೆಗಳಾಗಿವೆ. ಪ್ರಾಥಮಿಕ ವಲಯಗಳಲ್ಲಿನ ಕೆಲವು ರೀತಿಯ ಚಟುವಟಿಕೆಗಳನ್ನು ಕೆಳಗೆ ನೀಡಲಾಗಿದೆ.

ಹಸಿರುಮನೆ ಕೃಷಿ ಗಣಿಗಾರಿಕೆ

ಗಣಿಗಾರಿಕೆ



ಮೀನು ಸಾಕಾಣಿಕೆ (ಮೀನುಗಾರಿಕೆ)

ಅರಣ್ಯ



ಪಶುಸಂಗೋಪನೆ

not to be republished
© NCERT

### ಇದನ್ನು ಯೋಚಿಸಿ

ನೀವು ಮೇಲೆ ನೋಡಿರುವ ಯಾವುದೇ ಪ್ರಾಥಮಿಕ ಚಟುವಟಿಕೆಗಳ ಬಗ್ಗೆ ನೀವು ಯೋಚಿಸಬಹುದೇ? ಈ ಚಟುವಟಿಕೆಗಳಲ್ಲಿ ಬಳಸುವ ನೈಸರ್ಗಿಕ ಸಂಪನ್ಮೂಲಗಳು ಯಾವುವು? ಅವುಗಳಲ್ಲಿ ಎರಡನ್ನು ಹೆಸರಿಸಿ ಮತ್ತು ನಿಮ್ಮ ಅನುಭವಗಳನ್ನು ನಿಮ್ಮ ಸಹಪಾಠಿಗಳೊಂದಿಗೆ ಚರ್ಚಿಸಿ.

೧.

೨.

## ೨. ದ್ವಿತೀಯ ವಲಯದ ಚಟುವಟಿಕೆಗಳು

ಜನರು ಪ್ರಾಥಮಿಕ ವಲಯದ ಉತ್ಪಾದನೆಯ ಮೇಲೆ ಅವಲಂಬಿತರಾಗಿರುವ, ಅವುಗಳ ಸರಕುಗಳನ್ನು ಉತ್ಪಾದಿಸುವ, ಪರಿವರ್ತಿಸುವ ಆರ್ಥಿಕ ಚಟುವಟಿಕೆಗಳನ್ನು **ದ್ವಿತೀಯ ಚಟುವಟಿಕೆಗಳು** ಅಥವಾ **ದ್ವಿತೀಯ ವಲಯದ ಆರ್ಥಿಕ ಚಟುವಟಿಕೆಗಳು** ಎಂದು ಕರೆಯಲಾಗುತ್ತದೆ. ದ್ವಿತೀಯ ವಲಯವು ಕಟ್ಟಡ, ರಸ್ತೆಗಳು ಇತ್ಯಾದಿಗಳ ನಿರ್ಮಾಣ ಒಳಗೊಂಡಿರುತ್ತದೆ. ಮತ್ತು ನೀರು, ವಿದ್ಯುತ್, ಅನಿಲ- ಇಂತಹ ಇತರ ಅಗತ್ಯತೆಗಳಂತಹ ಉಪಯುಕ್ತತೆಗಳನ್ನು ಒದಗಿಸುವುದನ್ನು ಒಳಗೊಂಡಿದೆ. ಪ್ರಾಥಮಿಕ ವಲಯದಿಂದ ಕಚ್ಚಾ ವಸ್ತುಗಳನ್ನು ಮತ್ತಷ್ಟು ಮಾರಾಟ ಮಾಡಬಹುದಾದ ಇತರ ರೂಪಕ್ಕೆ ಸಂಸ್ಕರಿಸಲು ಕಾರ್ಖಾನೆಗಳು, ಉತ್ಪಾದನಾ ಘಟಕಗಳಲ್ಲಿ ಉತ್ಪನ್ನಗಳ ತಯಾರಿಕೆಯನ್ನು ಸಹ ಇದು ಒಳಗೊಂಡಿದೆ. ದ್ವಿತೀಯ ವಲಯದ ಚಟುವಟಿಕೆಗಳ ಕೆಲವು ಉದಾಹರಣೆಗಳಲ್ಲಿ ಗಿರಣಿಗಳಲ್ಲಿ ಹಿಟ್ಟು ತಯಾರಿಸಲು ಕೃಷಿ ಕ್ಷೇತ್ರಗಳಿಂದ ಪಡೆದ ಧಾನ್ಯಗಳನ್ನು ಸಂಸ್ಕರಿಸುವುದು, ನೆಲಗಡಲೆಯಿಂದ ಎಣ್ಣೆಯನ್ನು ಹೊರತೆಗೆಯುವುದು, ಚಹಾವನ್ನು ಪಡೆಯಲು ಚಹಾ ಎಲೆಗಳನ್ನು ಸಂಸ್ಕರಿಸುವುದು ಸೇರಿವೆ. ಅಂತೆಯೇ, ಕಾಡಿನಿಂದ ಬಂದ ಮರದ ಕಟ್ಟಿಗೆಯಿಂದ ಪೀಠೋಪಕರಣಗಳು, ಕಾಗದವಾಗಿ ಪರಿವರ್ತಿಸಲಾಗುತ್ತದೆ. ಹತ್ತಿಯನ್ನು ಬಟ್ಟೆಗಳನ್ನು ತಯಾರಿಸಲು ಮತ್ತು ಕಬ್ಬಿಣದ ಅದಿರಿನಿಂದ ಉಕ್ಕನ್ನು ಕಾರುಗಳು, ಟ್ರಕ್‌ಗಳು ಮುಂತಾದ ವಾಹನಗಳನ್ನು ತಯಾರಿಸಲು ಬಳಸಲಾಗುತ್ತದೆ.

**ದ್ವಿತೀಯ ವಲಯ:** ಪ್ರಾಥಮಿಕ ವಲಯದಿಂದ ಪಡೆದ ಕಚ್ಚಾ ವಸ್ತುಗಳನ್ನು ಮಾರಾಟ ಅಥವಾ ಬಳಕೆಗಾಗಿ ಉತ್ಪನ್ನಗಳಾಗಿ ಸಂಸ್ಕರಿಸುವುದನ್ನು ಒಳಗೊಂಡಿರುವ ಚಟುವಟಿಕೆಗಳ ಗುಂಪು.

ಆಟೋಮೊಬೈಲ್ ಕಾರ್ಖಾನೆ



ಜವಳಿ ಕಾರ್ಖಾನೆ

© NCERT not to be republished



ಔಷಧೀಯ ಕಾರ್ಖಾನೆ

ಪೀಠೋಪಕರಣ ಉತ್ಪಾದನಾ ಘಟಕ

## ಇದನ್ನು ತಪ್ಪಿಸದಬೇಡಿ

| ಆಟೋ ಮೊಬೈಲ್‌ನ ಪ್ರಕಾರಗಳು | ೨೦೨೨ ರಲ್ಲಿ ಭಾರತವು ತಯಾರಿಸಿಗ ಘಟಕಗಳ ಸಂಖ್ಯೆ |
|---|---|
| ಕಾರುಗಳಂತಹ ಪ್ರಯಾಣಿಕ ವಾಹನಗಳು | ೪೫ ಲಕ್ಷ |
| ಟ್ರಕ್‌ಗಳಂತಹ ವಾಣಿಜ್ಯ ವಾಹನಗಳು | ೧೦.೨ ಲಕ್ಷ |
| ತ್ರಿಚಕ್ರ ವಾಹನಗಳು | ೮.೬ ಲಕ್ಷ |
| ದ್ವಿಚಕ್ರ ವಾಹನಗಳು | ೨ ಕೋಟಿ ರೂ |

(ಮೂಲ: ಸೊಸೈಟಿ ಆಫ್ ಇಂಡಿಯನ್ ಆಟೋಮೊಬೈಲ್ ಉತ್ಪಾದನಾ ಕಾರ್ಖಾನೆ
https://www.siam.in/statistics.aspx?mpgid=8&pgidtrail=13 )

## ಇದನ್ನು ಅನ್ವೇಷಿಸೋಣ:

ಈಗ ನಾವು ದ್ವಿತೀಯ ವಲಯದ ಆರ್ಥಿಕ ಚಟುವಟಿಕೆಗಳ ಕೆಲವು ಉದಾಹರಣೆಗಳನ್ನು ನೋಡಿದ್ದೇವೆ, ದ್ವಿತೀಯ ವಲಯದಲ್ಲಿ ಇನ್ನೂ ಎರಡು ಆರ್ಥಿಕ ಚಟುವಟಿಕೆಗಳನ್ನು ಹೆಸರಿಸಬಹುದೇ?

೧.

೨.

© NCERT not to be republished

## ೩. ತೃತೀಯ ವಲಯದ ಚಟುವಟಿಕೆಗಳು

ಪ್ರಾಥಮಿಕ ಮತ್ತು ದ್ವಿತೀಯ ಚಟುವಟಿಕೆಗಳಲ್ಲಿ ತೊಡಗಿರುವ ಜನರಿಗೆ ಬೆಂಬಲವನ್ನು ಒದಗಿಸುವ ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು **ತೃತೀಯ ಚಟುವಟಿಕೆಗಳು** ಅಥವಾ **ತೃತೀಯ ವಲಯದ ಆರ್ಥಿಕ ಚಟುವಟಿಕೆಗಳು** ಎಂದು ಕರೆಯಲಾಗುತ್ತದೆ. ಇವುಗಳಲ್ಲಿ ನಾವು ನೋಡಲು ಸಾಧ್ಯವಾಗದ ಆದರೆ ಇನ್ನೂ ಬಹಳ ಮುಖ್ಯವಾದ ಪಾತ್ರವನ್ನು ವಹಿಸುವ ಸೇವೆಗಳು ಸೇರಿವೆ. ಉದಾಹರಣೆಗೆ ಟ್ರಕನ ಚಾಲಕರು ತರಕಾರಿಗಳನ್ನು ಜಮೀನಿನಿಂದ ಕಾರ್ಖಾನೆ ಅಥವಾ ಮಾರುಕಟ್ಟೆಗೆ ಸಾಗಿಸುತ್ತಾನೆ.

ಹಣ್ಣು ಅಥವಾ ತರಕಾರಿ ಮಾರಾಟಗಾರರು ಕೃಷಿ ಉತ್ಪನ್ನಗಳನ್ನು ಗ್ರಾಹಕರಿಗೆ ಮಾರಾಟ ಮಾಡುತ್ತಾರೆ. ಅಂತೆಯೇ ವೈದ್ಯರು, ದಾದಿಯರು, ಶಿಕ್ಷಕರು, ವಕೀಲರು ಮತ್ತು ವಿಮಾನ ಚಾಲಕರು ಅಗತ್ಯವಿರುವವರಿಗೆ ತಮ್ಮ ಸೇವೆಗಳನ್ನು ಒದಗಿಸುತ್ತಾರೆ. ಮೊಬೈಲ್ ಫೋನಗಳು, ದೂರದರ್ಶನಗಳು ಸೇರಿದಂತೆ ಎಲೆಕ್ಟ್ರಾನಿಕ್ ವಸ್ತುಗಳನ್ನು ದುರಸ್ತಿ ಮಾಡುವ, ಸೇವೆ ಸಲ್ಲಿಸುವ ತಂತ್ರಜ್ಞರು, ಕಾರುಗಳು ಮತ್ತು ಟ್ರಾಕ್ಟರುಗಳಂತಹ ವಾಹನಗಳನ್ನು ದುರಸ್ತಿ ಮಾಡುವ ಯಂತ್ರ ನಿರ್ವಾಹಕರು ನಿಯಮಿತವಾಗಿ ವಿದ್ಯುತ್ ಪೂರೈಕೆಯನ್ನು ಖಚಿತಪಡಿಸುವ ವಿದ್ಯುತ್ ನಿಯಂತ್ರಕರು ಇದ್ದಾರೆ. ಅವರ ಸೇವೆಗಳು ನಮ್ಮ ಜೀವನವನ್ನು ಸರಳಗೊಳಿಸುತ್ತವೆ. ಅಂತೆಯೇ ಮೊಬೈಲ್, ಅಂತರ್ಜಾಲ ಮೂಲಕ ಸಂವಹನ ಸೇವೆಗಳು, ತಂತ್ರಾಂಶ ಅಭಿವೃದ್ಧಿ ಮತ್ತು ಹೋಟೆಲಗಳು, ಉಪಹಾರ ಗೃಹ, ಬ್ಯಾಂಕು, ಶಾಲೆ, ಆಸ್ಪತ್ರೆ, ವಿಮಾನ ನಿಲ್ದಾಣ, ಅಂಗಡಿ, **ಗೋದಾಮುಗಳು** ಇತ್ಯಾದಿಗಳಲ್ಲಿನ ಸೇವೆಗಳು ತೃತೀಯ ವಲಯದ ಆರ್ಥಿಕ ಚಟುವಟಿಕೆಗಳಿಗೆ ಉದಾಹರಣೆಗಳಾಗಿವೆ. ಈ ವಲಯವನ್ನು **ಸೇವಾ ವಲಯ** ಎಂದೂ ಕರೆಯಲಾಗುತ್ತದೆ.

**ತೃತೀಯ ವಲಯ:** ಸಾರಿಗೆ, ಬ್ಯಾಂಕಿಂಗ್ ಮತ್ತು ವ್ಯವಹಾರದ ನಿರ್ವಹಣೆಯಂತಹ ಪ್ರಾಥಮಿಕ ಮತ್ತು ದ್ವಿತೀಯ ಕ್ಷೇತ್ರಗಳಿಗೆ ಪೂರಕವಾದ ಸೇವೆಗಳನ್ನು ಒದಗಿಸುವುದನ್ನು ಒಳಗೊಂಡಿರುವ ಚಟುವಟಿಕೆಗಳ ಗುಂಪು.

**ಗೋದಾಮುಗಳು:** ಉತ್ಪನ್ನಗಳನ್ನು ಮಾರಾಟ ಮಾಡುವ, ಬಳಸುವ ಅಥವಾ ಅಂಗಡಿಗಳಿಗೆ ಬಾಡಿಗೆಗೆ ನೀಡುವ ಮೊದಲು ಸಂಗ್ರಹಿಸಲು ಬಳಸುವ ದೊಡ್ಡ ಕಟ್ಟಡಗಳು.



ತಂತ್ರಾಂಶ/ಸಾಫ್ಟ್‌ವೇರ್ ಅಭಿವೃದ್ಧಿ ಸೇವೆಗಳು



ಉಪಹಾರ ಗೃಹಗಳಲ್ಲಿನ ಸೇವೆಗಳು

© NCERT not to be republished



ವಿಮಾನ ನಿಲ್ದಾಣಗಳಲ್ಲಿ ಸೇವೆಗಳು



ರಿಟೇಲ್‌ಅಂಗಡಿಗಳು

## ಆರ್ಥಿಕ ವಲಯಗಳ ನಡುವೆ ಪರಸ್ಪರ ಅವಲಂಬನೆ :

ಮೂರು ರೀತಿಯ ಆರ್ಥಿಕ ಚಟುವಟಿಕೆಗಳು ಅಥವಾ ಆರ್ಥಿಕ ವಲಯಗಳು ನೈಸರ್ಗಿಕ ಕಚ್ಚಾ ವಸ್ತುಗಳನ್ನು ಅಂತಿಮ ಬಳಕೆಗಾಗಿ ಸಿದ್ಧಪಡಿಸಿದ ಉತ್ಪನ್ನಗಳಾಗಿ ಪರಿವರ್ತಿಸುವ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಗುಜರಾತಿನ ಆನಂದ್ ಜಿಲ್ಲೆಯ ಒಂದು ಹಳ್ಳಿಗೆ ಕಾಲ್ಪನಿಕ ವಿಹಾರಕ್ಕೆ ಹೋಗೋಣ. ಅಲ್ಲಿ ಮೂರು ಕ್ಷೇತ್ರಗಳು ಹೇಗೆ ಪರಸ್ಪರ ಸಂಪರ್ಕ ಹೊಂದಿವೆ. ಪರಸ್ಪರ ಸಹಾಯಕವಾಗಿವೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳುವ ಆಸಕ್ತಿದಾಯಕ ಉದಾಹರಣೆಯನ್ನು ಅಧ್ಯಯನ ಮಾಡೋಣ.

### ಹೈನುಗಾರಿಕೆ ಸಹಕಾರಿ: ಕೃಷಿ ತೋಟದಿಂದ ಊಟದ ತಟ್ಟೆಯವರಗೆ

ಈ ದಿನಗಳಲ್ಲಿ ಗುಜರಾತಿನ ರೈತರು ಹಾಲಿನ ಪಾತ್ರೆಗಳೊಂದಿಗೆ ಅವರಿಗೆ ಉತ್ತಮ ಸ್ನೇಹಿತರಂತಿರುವ ಹಸುಗಳು, ಎಮ್ಮೆಗಳ ಕಾರಣದಿಂದ ಸಂತೋಷದಿಂದ ದಿನವನ್ನು ಆರಂಭಿಸುತ್ತಾರೆ. ರೈತರು ಮತ್ತು ಅವರ ಕುಟುಂಬ ಜೀವನದಲ್ಲಿ ಹಸುಗಳಿಗೆ ವಿಶೇಷ ಸ್ಥಾನವಿದೆ. ರೈತರು ಹಸುಗಳಿಂದ ಹಾಲು ಕರೆಯುತ್ತಾರೆ. ಹಾಲನ್ನು ಹತ್ತಿರದ ಡೈರಿಗೆ ಮಾರಾಟ ಮಾಡುತ್ತಾರೆ. ತಿಂಗಳ ಕೊನೆಯಲ್ಲಿ ಹಾಲಿನ ಪ್ರಮಾಣ ಮತ್ತು ಗುಣಮಟ್ಟದ ಆಧಾರದ ಮೇಲೆ ಅವರಿಗೆ ಹಣವನ್ನು ಪಾವತಿಸಲಾಗುತ್ತದೆ. ಆದರೆ ಸುಮಾರು ೫೦ ವರ್ಷಗಳ ಹಿಂದೆ ಈ ರೀತಿ ವ್ಯವಸ್ಥೆಯು ಇರಲಿಲ್ಲ.

**ಡೈರಿ:** ಹಾಲನ್ನು ತೆಗೆದುಕೊಂಡು ಸಂಗ್ರಹಿಸುವ ಸ್ಥಳ

ಇದು ಆನಂದ್ ಮಿಲ್ಕ್ ಯೂನಿಯನ್ ಲಿಮಿಟೆಡ್ (ಅಮುಲ್) ಎಂಬ ಹಾಲು ಸಹಕಾರಿ ಸಂಘದ ಅದ್ಭುತ ಕಥೆ. ೧೯೪೦ ರ ದಶಕದ ಆರಂಭದಲ್ಲಿ ಆನಂದ್ ಜಿಲ್ಲೆಯ ರೈತರು ನೆರೆಯ ಹಳ್ಳಿಗಳಿಗೆ ಹಾಲನ್ನು ಮಾರಾಟ ಮಾಡುತ್ತಿದ್ದರು. ಸುಡುವ ಬಿಸಿಲಿನಲ್ಲಿ ಹಾಲನ್ನು ಮಾರಾಟ ಮಾಡಲು ಸೈಕಲ್ ಬಳಸುತ್ತಿದ್ದರು. ಹತ್ತಿರದ ಹಳ್ಳಿಗಳಿಗೆ ನಡೆದುಕೊಂಡು ಹೋಗಬೇಕಾಗಿತ್ತು.

© NCERT not to be republished

ನಿಮಗೆ ತಿಳಿದಿರುವಂತೆ ಬಿಸಿ ವಾತಾವರಣದಲ್ಲಿ ಹಾಲು ಹಾಳಾಗುತ್ತದೆ ಅಥವಾ ಬಹಳ ವೇಗವಾಗಿ ಮೊಸರಿನಂತಾಗಿ ಒಡೆದು ಹಾಳಾಗುತ್ತದೆ. ಹಾಲು ಹಾಳಾಗುವ ಮೊದಲು ರೈತರು ಅದನ್ನು ಬೇಗನೆ ಮಾರಾಟ ಮಾಡಬೇಕಾಗಿತ್ತು. ಅವರು ಗಳಿಸುವ ಸಣ್ಣ ಮೊತ್ತದ ಹಣದಲ್ಲಿ ಇದು ಸಾಕಷ್ಟು ಕಷ್ಟದಾಯಕವಾಗಿತ್ತು. ಆದ್ದರಿಂದ ಅವರು ಮಧ್ಯವರ್ತಿಗಳು ಎಂದು ಕರೆಯಲ್ಪಡುವ ಜನರನ್ನು ಅವಲಂಬಿಸಿದ್ದರು. ಅವರು ರೈತರಿಂದ ಕಡಿಮೆ ಬೆಲೆಗೆ ಹಾಲನ್ನು ದೊಡ್ಡ ಪ್ರಮಾಣದಲ್ಲಿ ಖರೀದಿಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದರು. ಅನೇಕ ಬಾರಿ, ರೈತರು ಮಧ್ಯವರ್ತಿಗಳಿಂದ ಮೋಸ ಮತ್ತು ಕಿರುಕುಳವನ್ನು ಅನುಭವಿಸಿದರು.

ಒಂದು ದಿನ ರೈತರು ಒಟ್ಟಾಗಿ ತಮ್ಮ ಸಮಸ್ಯೆಗಳೊಂದಿಗೆ ಪ್ರಮುಖ ರಾಷ್ಟ್ರೀಯ ನಾಯಕ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರನ್ನು ಸಂಪರ್ಕಿಸಿದರು. ಸ್ವತಂತ್ರರಾಗಲು ಮತ್ತು ಮಧ್ಯವರ್ತಿಗಳನ್ನು ಅವಲಂಬಿಸುವುದನ್ನು ನಿಲ್ಲಿಸಲು ಸಹಕಾರಿ ಸಂಘವನ್ನು ರಚಿಸುವಂತೆ ಅವರು ಸಲಹೆ ನೀಡಿದರು. ಸಹಕಾರಿ ಸಂಸ್ಥೆಯಾಗಿ, ರೈತರು ಹಾಲು ಸಂಗ್ರಹಣೆ, ಸಂಸ್ಕರಣೆ ಮತ್ತು ವಿತರಣೆಯ ಸಂಪೂರ್ಣ ಕಾರ್ಯಾಚರಣೆಯನ್ನು ಸ್ವತಃ ನೋಡಿಕೊಳ್ಳುವ ಮೂಲಕ ಒಂದು ಗುಂಪಾಗಿ ಹಾಲನ್ನು ಖರೀದಿಸಲು ಮತ್ತು ಮಾರಾಟ ಮಾಡಲು ಸಾಧ್ಯವಾಗುತ್ತದೆ. ರೈತರು ಸರ್ದಾರ್ ಪಟೇಲರ ಸಲಹೆಯನ್ನು ಸ್ವೀಕರಿಸಿದರು!



ತ್ರಿಭುವನ್ ದಾಸ್ ಪಟೇಲ್ (ವಕೀಲ ಮತ್ತು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು) ಮತ್ತು ಡಾ.ವರ್ಗೀಸ್ ಕುರಿಯನ್ (ಮುಂಬೈನ ಡೈರಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಎಂಜಿನಿಯರ್) ಅವರ ನಾಯಕತ್ವದಲ್ಲಿ ಅಮುಲ್ ಅನ್ನು ೧೯೪೬ ರಲ್ಲಿ ಸ್ಥಾಪಿಸಲಾಯಿತು.

**ಸಹಕಾರ:** ತಮ್ಮ ಆರ್ಥಿಕ ಮತ್ತು ಸಾಮಾಜಿಕ ಅಗತ್ಯಗಳನ್ನು ಔಪಚಾರಿಕ ರೀತಿಯಲ್ಲಿ ಪೂರೈಸಲು ಸ್ವಯಂಪ್ರೇರಣೆಯಿಂದ ಒಗ್ಗೂಡುವ ಜನರ ಗುಂಪು. ಅವರು ತಮ್ಮ ನಡುವೆ ಸಹಕಾರವನ್ನು ಹೊಂದಿದ್ದಾರೆ. ನಿರ್ಧಾರಗಳನ್ನು ಸದಸ್ಯರು ಸಾಮೂಹಿಕವಾಗಿ ತೆಗೆದುಕೊಳ್ಳುತ್ತಾರೆ.

**ಮಧ್ಯವರ್ತಿಗಳು:** ಉತ್ಪಾದಕರಿಂದ ಸರಕುಗಳನ್ನು ಖರೀದಿಸಿ ಗ್ರಾಹಕರಿಗೆ ಮಾರಾಟ ಮಾಡುವ ವ್ಯಕ್ತಿಗಳು. ಮಧ್ಯವರ್ತಿಗಳು ಈ ಸೇವೆಗೆ ಶುಲ್ಕ ವಿಧಿಸುತ್ತಾರೆ.

© NCERT not to be republished



ವರ್ಗೀಸ್ ಕುರಿಯನ್ (ಎಡ) ಮತ್ತು ತ್ರಿಭುವನ್ ದಾಸ್ ಪಟೇಲ್ (ಬಲ)

**ಪಾಶ್ಚರೀಕರಣ:** ಹಾಲನ್ನು ಸಂರಕ್ಷಿಸುವ ಒಂದು ಪ್ರಕ್ರಿಯೆ. ಹಾನಿಕಾರಕ ಬ್ಯಾಕ್ಟೀರಿಯಾವನ್ನು ಕೊಲ್ಲಲು ನಿರ್ದಿಷ್ಟ ತಾಪಮಾನಕ್ಕೆ ಬಿಸಿ ಮಾಡುವ ಮೂಲಕ ಹಾಲು ಕೆಡದಂತೆ ಸಂಗ್ರಹಿಸಲಾಗುವುದು.

**ಕಾರ್ಖಾನೆ:** ಅಂತಿಮ ಉತ್ಪನ್ನವನ್ನು, ಸರಕುಗಳನ್ನು ತಯಾರಿಸುವ ಅಥವಾ ವಿವಿಧ ಘಟಕಗಳನ್ನು ಒಟ್ಟುಗೂಡಿಸುವ ಕಟ್ಟಡಗಳ ಗುಂಪು.

**ಬಿಡಿ/ರಿಟೇಲ್ ವ್ಯಾಪಾರ:** ಮರುಮಾರಾಟದ ಬದಲು ಅಂತಿಮ ಗ್ರಾಹಕರ ಬಳಕೆಗಾಗಿ ಸಣ್ಣ ಪ್ರಮಾಣದಲ್ಲಿ ಸರಕುಗಳ ಮಾರಾಟ

**ರಫ್ತು:** ಉತ್ಪಾದಿಸಲಾದ ಸರಕುಗಳು ಮತ್ತು ಸೇವೆಗಳು ಒಂದು ದೇಶದಲ್ಲಿ ಮತ್ತು ಮತ್ತೊಂದು ದೇಶದಲ್ಲಿ ಖರೀದಿದಾರರಿಗೆ ಅಥವಾ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತದೆ.

ಈ ಉಪಕ್ರಮವು ಮಹಿಳೆಯರು ಸೇರಿದಂತೆ ರೈತರನ್ನು ಒಟ್ಟುಗೂಡಿಸಿತು. ಹಾಲಿನ ಉತ್ಪಾದನೆ ಮತ್ತು ಮಾರಾಟದ ಮೇಲೆ ನಿಯಂತ್ರಣವನ್ನು ತಂದಿತು. ಹಾಲು ಉತ್ಪಾದಕರು ಸಾಮೂಹಿಕವಾಗಿ ಹಾಲಿನ ಉತ್ಪಾದನೆ, ಪಾಶ್ಚರೀಕರಣ ಮತ್ತು ಮಾರಾಟದಂತಹ ಎಲ್ಲಾ ವಿಷಯಗಳಲ್ಲಿ ತಮ್ಮದೇ ಆದ ನಿರ್ಧಾರಗಳನ್ನು ತೆಗೆದುಕೊಂಡರು. ಕಾರ್ಯಭಾರಗಳನ್ನು ಎಲ್ಲರೂ ಹಂಚಿಕೊಂಡರು. ಇದು ಅವರ ಆದಾಯವನ್ನು ಕ್ರಮೇಣ ಹೆಚ್ಚಿಸಲು ಸಹಾಯ ಮಾಡಿತು. ಅವರಿಗೆ ಇನ್ನು ಮುಂದೆ ಮಧ್ಯವರ್ತಿಗಳ ತೊಂದರೆಯಿಲ್ಲ. ಅವರು ಒಂದು ದೊಡ್ಡ ಕುಟುಂಬದಂತೆ ಆದರು.

[redacted]

ಹೆಚ್ಚು ಹೆಚ್ಚು ರೈತರು ಸಹಕಾರಿ ಸಂಘದ ಪ್ರಯೋಜನಗಳನ್ನು ಪಡೆಯಲು ಪ್ರಾರಂಭಿಸುತ್ತಿದ್ದಂತೆ ಅದು ಬೆಳೆಯುತ್ತಲೇ ಹೋಯಿತು. ಸಂಗ್ರಹಿಸುತ್ತಿದ್ದ ಹಾಲಿನ ಪ್ರಮಾಣವು ತುಂಬಾ ದೊಡ್ಡದಾಯಿತು. ಅದರಿಂದ ರೈತರು ಹಾಲಿನ ಇತರ ಉತ್ಪನ್ನಗಳನ್ನು ತಯಾರಿಸಲು ನಿರ್ಧರಿಸಿದರು. ಅವರು ಆನಂದ್ ನಗರದಲ್ಲಿ ಕಾರ್ಖಾನೆಯನ್ನು ಸ್ಥಾಪಿಸಿದರು. ಬೆಣ್ಣೆ ಮತ್ತು ಹಾಲಿನ ಪುಡಿಯನ್ನು ಉತ್ಪಾದಿಸಲು ಪ್ರಾರಂಭಿಸಿದರು.

[redacted]

ಇಂದು ಸಹಕಾರ ತತ್ವದಡಿಯಲ್ಲಿ ಭಾರತದಾದ್ಯಂತ ಅನೇಕ ಹಾಲು ಸಂಸ್ಕರಣಾ ಘಟಕಗಳು, ಕಾರ್ಖಾನೆಗಳಲ್ಲಿ ತಯಾರಿಸಿದ ವ್ಯಾಪಕ ಶ್ರೇಣಿಯ ಉತ್ಪನ್ನಗಳನ್ನು ಹೊಂದಿದೆ. ನೀವು ಕೆಲವನ್ನು ಹೆಸರಿಸಬಹುದೇ? ಹಾಲಿನ ಉತ್ಪನ್ನಗಳನ್ನು ನಂತರ ದೇಶಾದ್ಯಂತ ಸಣ್ಣ ಮತ್ತು ದೊಡ್ಡ ಚಿಲ್ಲರೆ ಅಂಗಡಿಗಳಲ್ಲಿ ಸಾಗಿಸಿ ಮಾರಾಟ ಮಾಡಲಾಗುತ್ತದೆ. ವಾಸ್ತವವಾಗಿ ಅವರು ಪ್ರಪಂಚದಾದ್ಯಂತದ ಹಲವಾರು ದೇಶಗಳಿಗೆ ಉತ್ಪನ್ನಗಳನ್ನು ರಫ್ತು ಮಾಡುತ್ತಾರೆ. ಇದು ಅದ್ಭುತವಲ್ಲದೇ ಮತ್ತೇನು.

ಈ ಆಕರ್ಷಕ ಕಥೆಯಲ್ಲಿ ಈ ಸಹಕಾರಿ ಸಂಘದ ರೈತರು ತಮ್ಮ ಹಸುಗಳ ಹಾಲು ಕರೆದು, ನಂತರ ಹಾಲನ್ನು ಮಾರಾಟ ಮಾಡಲು ತರುತ್ತಾರೆ. ಈ ರೀತಿಯ ಆರ್ಥಿಕ ಚಟುವಟಿಕೆಯನ್ನು ಪ್ರಾಥಮಿಕ ವಲಯದ ಆರ್ಥಿಕ ಚಟುವಟಿಕೆ ಎಂದು ಕರೆಯಲಾಗುತ್ತದೆ. ಏಕೆಂದರೆ ಉತ್ಪನ್ನವನ್ನು (ಹಾಲು) ನೇರವಾಗಿ ನೈಸರ್ಗಿಕ ಮೂಲದಿಂದ (ಹಸು/ ಜಾನುವಾರುಗಳು) ಪಡೆಯಲಾಗುತ್ತದೆ

© NCERT not to be republished

ನಂತರ ಹಾಲನ್ನು ಸಂಸ್ಕರಿಸಲಾಗುತ್ತದೆ. ಮತ್ತು ಕಾರ್ಖಾನೆಗಳಲ್ಲಿ-(ದ್ರವರೂಪದಿಂದ) ಇತರೆ ಪದಾರ್ಥಗಳಾದ ಹಾಲಿನ ಪುಡಿ, ತುಪ್ಪ, ಚೀಸ್, ಬೆಣ್ಣೆ ಮತ್ತು ಇತರ ಅನೇಕ ರೂಪಗಳಿಂದ ಮತ್ತೊಂದು ರೂಪಕ್ಕೆ ಪರಿವರ್ತಿಸಲಾಗುತ್ತದೆ. ಈ ಆರ್ಥಿಕ ಚಟುವಟಿಕೆಗಳನ್ನು ದ್ವಿತೀಯ ವಲಯದ ಆರ್ಥಿಕ ಚಟುವಟಿಕೆಗಳು ಎಂದು ಕರೆಯಲಾಗುತ್ತದೆ.



ಅಮುಲ್ ತಾನು ತಯಾರಿಸುವ ಎಲ್ಲಾ ಉತ್ಪನ್ನಗಳೊಂದಿಗೆ ಏನು ಮಾಡುತ್ತದೆ? ಇದು ಅವುಗಳನ್ನು ವಿವಿಧ ಸ್ಥಳಗಳಲ್ಲಿ ಮಾರಾಟ ಮಾಡುತ್ತದೆ. ಅಮುಲ್ ತನ್ನ ಉತ್ಪನ್ನಗಳನ್ನು ಸಾಗಿಸಲು ಲಾರಿಗಳು ಮತ್ತು ಟ್ರಕ್‌ಗಳು ಜೊತೆಗೆ ರೈಲ್ವೆ, ವಾಯು ಮತ್ತು ಹಡಗು ಸೇವೆಗಳನ್ನು ಬಳಸುತ್ತದೆ. ಇದು ಚಿಲ್ಲರೆ ಅಂಗಡಿಗಳನ್ನು ಸ್ಥಾಪಿಸಿದೆ. ಗುಜರಾತನಾದ್ಯಂತ ಪಟ್ಟಣ, ನಗರ ಮತ್ತು ಹಳ್ಳಿಗಳಲ್ಲಿ ಮತ್ತು ಭಾರತದಾದ್ಯಂತ ವಿವಿಧ ರಾಜ್ಯಗಳಲ್ಲಿ ಇತರ ಅಂಗಡಿಗಳಿಗೆ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಪೂರೈಸುತ್ತದೆ. ಇಲ್ಲಿ ಸಾರಿಗೆ, ವ್ಯಾಪಾರ ಮತ್ತು ಚಿಲ್ಲರೆ ವ್ಯಾಪಾರವು ತೃತೀಯ ಚಟುವಟಿಕೆಯಾಗಿದೆ.

## ಇದನ್ನು ತಪ್ಪಿಸಬೇಡಿ:

ಅಮುಲ್ ನಂತೆಯೇ, ದೇಶದ ಉಳಿದೆಡೆಯಲ್ಲಿಯೂ ಇದೆ ತರಹದ ಅನೇಕ ಹಾಲು ಸಹಕಾರಿ ಸಂಘಗಳು ಈ ಕೆಳಗಿನಂತಿವೆ. ಕರ್ನಾಟಕದ ನಂದಿನಿ, ದೆಹಲಿ-ಎನ್.ಸಿ.ಆರ್ ಮದರ್ ಡೈರಿ, ತಮಿಳುನಾಡಿನ ಆವಿನ್, ಆಂಧ್ರಪ್ರದೇಶದ ವಿಜಯಾ, ನಾಗಾಲ್ಯಾಂಡಿನ ಕೆವಿ, ಬಿಹಾರದ ಸುಧಾ, ಪಂಜಾಬಿನ ವರ್ಕಾ ಮುಂತಾದ ಮೌಲ್ಯಯುತ ಹಾಲು ಸಹಕಾರ ಸಂಸ್ಥೆಗಳಿವೆ. ರೈತರು, ದಿವ್ಯಾಂಗರು ಮತ್ತು ಮಹಿಳೆಯರಂತಹ ಗುಂಪುಗಳು ಒಗ್ಗೂಡಲು ಮತ್ತು ಅವರ ಜೀವನಕ್ಕೆ ಸಮೃದ್ಧಿಯನ್ನು ತರಲು ಸಹಾಯ ಮಾಡಿದ ನಿಮ್ಮ ಸುತ್ತಮುತ್ತಲಿನ ಒಂದು ಸಹಕಾರಿ ಸಂಸ್ಥೆಯನ್ನು ನೀವು ಹೆಸರಿಸಬಹುದೇ?

© NCERT not to be republished

ಕೆಳಗಿನ ಚಿತ್ರಗಳ ಸಹಾಯದಿಂದ, ನೀವು ಅಧ್ಯಯನ ಮಾಡುವ ಪುಸ್ತಕಗಳನ್ನು ಹೇಗೆ ತಯಾರಿಸಲಾಗುತ್ತದೆ ಎಂಬುದನ್ನು ನೋಡೋಣ. ಈ ಚಿತ್ರಗಳು ತಿರುಳು (ಮರದ ನಾರು) ಕಾಗದವಾಗಿ ಮತ್ತು ನಂತರ ಮುದ್ರಣ ಪಠ್ಯಪುಸ್ತಕಗಳಾಗಿ ರೂಪಾಂತರಗೊಳ್ಳುವುದನ್ನು ತೋರಿಸುತ್ತವೆ.



ಚಿತ್ರ. ೧೪.೧

© NCERT not to be republished

ಮರಗಳಿಂದ ತಿರುಳನ್ನು ಹೊರತೆಗೆಯುವುದರಿಂದ ಹಿಡಿದು ಕಾಗದವನ್ನು ತಯಾರಿಸುವವರೆಗೆ ಮತ್ತು ಅಂತಿಮವಾಗಿ ಪುಸ್ತಕಗಳನ್ನು ಉತ್ಪಾದಿಸುವವರೆಗೆ ಈ ಪ್ರಕ್ರಿಯೆಯ ಭಾಗವಾಗಿದ್ದ ಯಾವುದೇ ಚಟುವಟಿಕೆಗಳು ಈ ಮೂರು ಕ್ಷೇತ್ರಗಳು ಒಟ್ಟಾಗಿ ಕೆಲಸ ಮಾಡದಿದ್ದರೆ ಸಾಧ್ಯವಾಗುತ್ತಿರಲಿಲ್ಲ.

## ಇದರ ಕುರಿತು ಆಲೋಚಿಸಿ:

ಚಿತ್ರ ೧೪.೧ ರಲ್ಲಿ ತೋರಿಸಿರುವ ಪ್ರಕ್ರಿಯೆಯ ವಿವಿಧ ಹಂತಗಳನ್ನು ಗಮನಿಸಿ ಮತ್ತು ಅವುಗಳನ್ನು ನಿಮ್ಮ ಸಹಪಾಠಿಗಳೊಂದಿಗೆ ಚರ್ಚಿಸಿ.

## ನಾವೀಗ ಅನ್ವೇಷಿಸೋಣ:

ಪುಟ್ಟ ೨೦೬ ಚಿತ್ರ ೧೪.೧ ನ ಚಿತ್ರದಲ್ಲಿ ತೋರಿಸಿರುವಂತೆ ಚಿತ್ರಗಳನ್ನು ಅಂಟಿಸಿ:

೧. ಪ್ರಾಥಮಿಕ ವಲಯ

೨. ದ್ವಿತೀಯ ವಲಯ

೩. ತೃತೀಯ ವಲಯ

## ಇದನ್ನು ತಪ್ಪಿಸಬೇಡಿ:

ಇತ್ತೀಚಿನ ದಿನಗಳಲ್ಲಿ ಬಳಸಿದ ಕಾಗದವನ್ನು ಹೊಸ ಕಾಗದವನ್ನಾಗಿ ತಯಾರಿಸಲು ಮರುಬಳಕೆ ಮಾಡಲಾಗುತ್ತದೆ. ಕೇವಲ ಒಂದು ಟನ್ ಕಾಗದವನ್ನು ಮರುಬಳಕೆ ಮಾಡುವುದರಿಂದ 17 ಮರಗಳು ಮತ್ತು ತ್ಯಾಜ್ಯವನ್ನು ಎಸೆಯುವ 2.5 ಘನ ಮೀಟರ್ ಭೂಭರ್ತಿ ಸ್ಥಳವನ್ನು ಉಳಿಸುತ್ತದೆ. ಮರದ ತಿರುಳಿನಿಂದ ಹೊಸ ಕಾಗದವನ್ನು ತಯಾರಿಸುವುದಕ್ಕಿಂತ ಕಾಗದವನ್ನು ಮರುಬಳಕೆ ಮಾಡವುದ್ದರಿಂದ ಶೇಕಡಾ 70 ರಷ್ಟು ಕಡಿಮೆ ಶಕ್ತಿ ಮತ್ತು ನೀರು ಬೇಕಾಗುತ್ತದೆ.

© NCERT not to be republished



ನಿಮ್ಮ ಶಾಲೆಯ ತರಗತಿ ಮತ್ತು ಕಚೇರಿಗಳಲ್ಲಿ ನಾವು ಕಾಗದವನ್ನು ನ್ಯಾಯಯುತವಾಗಿ ಬಳಸಬಹುದಾದ ವಿವಿಧ ವಿಧಾನಗಳು ಯಾವುವು?

**ನಾವೀಗ ಅನ್ವೇಷಿಸೋಣ:**

ನಿಮ್ಮ ನೆರೆಹೊರೆಯ ಆರ್ಥಿಕ ಚಟುವಟಿಕೆಗಳನ್ನು ಪಟ್ಟಿ ಮಾಡಿ. ಅವುಗಳನ್ನು ಪ್ರಾಥಮಿಕ, ದ್ವಿತೀಯ ಅಥವಾ ತೃತೀಯ ಎಂದು ಸೂಕ್ತವಾಗಿ ಹೆಸರಿಸಿ. ಅವು ಪರಸ್ಪರ ಹೇಗೆ ಸಂಪರ್ಕ ಹೊಂದಿವೆ ಎಂಬುದನ್ನು ತೋರಿಸಲು ಬಾಣದ ಗುರುತುಗಳನ್ನು ಬರೆಯಿರಿ. ಅವರು ಯಾವ ರೀತಿಯಲ್ಲಿ ಪರಸ್ಪರ ಅವಲಂಬಿತರಾಗಿದ್ದಾರೆ? ಒಂದು ಚಟುವಟಿಕೆಯು ಅಸ್ತಿತ್ವದಲ್ಲಿಲ್ಲದಿದ್ದರೆ ಏನಾಗುತ್ತದೆ?

## ನಾವು ಮುಂದುವರಿಯುವ ಮೊದಲು...

→ ಈ ಅಧ್ಯಾಯದಲ್ಲಿ ನಾವು ಆರ್ಥಿಕ ಚಟುವಟಿಕೆಗಳ ಮೂರು ಕ್ಷೇತ್ರಗಳ ಬಗ್ಗೆ ಕಲಿತಿದ್ದೇವೆ.

→ ವಿವಿಧ ಉದಾಹರಣೆಗಳು ಮತ್ತು ವಿವರಣೆಗಳು ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ಎಂಬ ಮೂರು ರೀತಿಯ ಆರ್ಥಿಕ ಚಟುವಟಿಕೆಗಳು ಅಥವಾ ವಲಯಗಳ ನಡುವಿನ ವ್ಯತ್ಯಾಸ ಮತ್ತು ಪರಸ್ಪರ ಅವಲಂಬನೆಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಿದವು.

## ಪ್ರಶ್ನೆಗಳು, ಚಟುವಟಿಕೆಗಳು ಮತ್ತು ಯೋಜನೆಗಳು

೧. ಪ್ರಾಥಮಿಕ ವಲಯ ಯಾವುದು? ಇದು ದ್ವಿತೀಯ ವಲಯಕ್ಕಿಂತ ಹೇಗೆ ಭಿನ್ನವಾಗಿದೆ? ಎರಡು ಉದಾಹರಣೆಗಳನ್ನು ನೀಡಿ.

೨. ದ್ವಿತೀಯ ವಲಯವು ತೃತೀಯ ವಲಯವನ್ನು ಹೇಗೆ ಅವಲಂಬಿಸಿದೆ? ಕೆಲವು ಉದಾಹರಣೆಗಳೊಂದಿಗೆ ವಿವರಿಸಿ.

೩. ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ವಲಯಗಳ ನಡುವಿನ ಪರಸ್ಪರ ಅವಲಂಬನೆಯ ಉದಾಹರಣೆಯನ್ನು ನೀಡಿ. ಹರಿವಿನ ರೇಖಾಚಿತ್ರವನ್ನು ಬಳಸಿಕೊಂಡು ಅದನ್ನು ತೋರಿಸಿ.

© NCERT not to be republished